ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**667**
ಸದಸ್ಯರ ಹೆಸರು	:	ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	17.09.2021
ಉತ್ತರಿಸುವವರು	:	ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯ ಸರ್ಕಾರವು ರೈತರು ಮತ್ತು ಡೀಲರುಗಳ ಅನುಕೂಲಕ್ಕಾಗಿ ಬೆಳೆ ಸ್ಥಿರೀಕರಣ ನಿಧಿಯ ಪುನರ್ ಸ್ಥಾಪನೆ ಮಾಡಿರುತ್ತದೆಯೇ; ಮಾಡಿದ್ದಲ್ಲಿ, ವಿಳಂಬವಾಗಲು ಕಾರಣವೇನು;	ರಾಜ್ಯ ಸರ್ಕಾರವು ರೈತರು ಮತ್ತು ರೀಲರುಗಳ ಅನುಕೂಲಕ್ಕಾಗಿ ಬೆಲೆ ಸ್ಥಿರೀಕರಣ ನಿಧಿಯ ಪುನರ್ ಸ್ಥಾಪನೆ ಮಾಡಿರುತ್ತದೆ. ಬೆಲೆ ಸ್ಥಿರೀಕರಣ ನಿಧಿ ಯೋಜನೆ ಪ್ರಾರಂಭವಾದಗಿನಿಂದ 2004-05ನೇ ಸಾಲಿನವರೆವಿಗೂ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದ್ದೂ, 2005-06ನೇ ಸಾಲಿನಲ್ಲಿ ಈ ಯೋಜನೆಗೆ ಅನುದಾನ ಬಿಡುಗಡೆಯಾಗದ ಕಾರಣ ಈ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುತ್ತಿದ್ದ, ಪ್ರಮುಖ ಕಾರ್ಯಕ್ರಮಗಳನ್ನು ರೇಷ್ಮೆ ಸಾಕಾಣಿಕಾ ಅಭಿವೃದ್ಧಿ ಚಟುವಟಿಕೆ ಯೋಜನೆ ಲೆಕ್ಕಶೀರ್ಷಿಕೆ 2851-00-107-2-04 (059) ಯಡಿ ಅನುದಾನವನ್ನು ಒದಗಿಸಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿತ್ತು. 2014-15ನೇ ಸಾಲಿನಲ್ಲಿ ಅನುಷ್ಠಾನದಲ್ಲಿದ್ದ ಹಲವು ಯೋಜನೆಗಳನ್ನು ಒಗ್ಗೂಡಿಸಿ, ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕತೃತ್ವರ್ಷ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆ ಲೆಕ್ಕಶೀರ್ಷಿಕೆ 2851-00-107-1-48(106)ರಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು. 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬೆಲೆ ಸ್ಥಿರೀಕರಣ ನಿಧಿಯನ್ನು ಪುನರ್ ಚಾಲನೆಗೊಳಿಸಲು ಘೋಷಿಸಲಾಗಿತ್ತು. ಪ್ರಸ್ತುತ 2020-21ನೇ ಸಾಲಿನಿಂದ ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ ಲೆಕ್ಕಶೀರ್ಷಿಕೆ 2851-00-107-1-51 ಅಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನವನ್ನು ಆಯವ್ಯಯದಲ್ಲಿ ಒದಗಿಸುತ್ತಿದೆ.

ಆ	ಡಾ|| ಹೆಚ್.ಬಸವರಾಜ್ ರವರ ತಾಂತ್ರಿಕ ಸಮಿತಿಯ ವರದಿಯನ್ನು ರೇಷ್ಮೆ ಇಲಾಖೆ ಅನುಷ್ಠಾನಗೊಳಿಸಿರುತ್ತದೆಯೇ: ಸದರಿ ಸಮಿತಿಯ ವರದಿಯಂತೆ ರೇಷ್ಮೆ ಗೂಡು ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುದಾನ ನೀಡಲಾಗಿರುತ್ತದೆಯೇ: ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ಪರೀಕ್ಷಾ ಕೇಂದ್ರ ಸ್ಥಾಪನೆಯಾಗಿರುತ್ತದೆಯೇ:	ಡಾ|| ಹೆಚ್.ಬಸವರಾಜ್ ರವರ ತಾಂತ್ರಿಕ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ರೇಷ್ಮೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಸದರಿ ಸಮಿತಿಯ ವರದಿಯಂತೆ ರೇಷ್ಮೆ ಗೂಡು ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ರಕ್ಷಣಾತ್ಮಕ ದರ ಎಂಬ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ಪರೀಕ್ಷಾ ಕೇಂದ್ರ ಸ್ಥಾಪನೆ ಕಾರ್ಯಕ್ರಮವನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದ್ದು, ರೇಷ್ಮೆ ಗೂಡಿನ ಮಾರುಕಟ್ಟೆಗಳಾದ ಕನಕಪುರ, ಕೊಳ್ಳೇಗಾಲ ಹಾಗೂ ಚನ್ನಪಟ್ಟಣದಲ್ಲಿ ಪ್ರಾಯೋಗಿಕವಾಗಿ ರೇಷ್ಮೆ ಗೂಡು ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸಿ, ಸದರಿ ಪರೀಕ್ಷಾ ಪ್ರಯೋಗಾಲಯಗಳ ಅನುಷ್ಠಾನಕ್ಕೆ ಅವಶ್ಯಕ ಸ್ಥಳಾವಕಾಶ, ಪೀಠೋಪಕರಣ ಮತ್ತು ಪರೀಕ್ಷಾ ಸಾಮಗ್ರಿಗಳನ್ನು ವ್ಯವಸ್ಥೆ ಮಾಡಲಾಗಿದೆ.
ಇ	ರೀಲರುಗಳಿಗೆ ಉದ್ಯಮ ಬಂಡವಾಳ ವನ್ನು ಒದಗಿಸುವುದಕ್ಕೆ ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ. ಇಲ್ಲದಿದ್ದಲ್ಲಿ ಯಾವ ಸಮಯದೊಳಗೆ ರಾಜ್ಯ ಸರ್ಕಾರ ಸಾಂಸ್ಥಿಕ ಮರು ಹಣಕಾಸಿನ ವ್ಯವಸ್ಥೆಯನ್ನು ರೀಲರುಗಳಿಗೆ ನೀಡುತ್ತದೆ;	ಶೂನ್ಯ ಬಡ್ಡಿದರದಲ್ಲಿ ದುಡಿಮೆ ಬಂಡವಾಳ ಕಾರ್ಯಕ್ರಮವನ್ನು ಜಾರಿಗೊಳಿಸಲು ವಿವಿಧ ಪ್ರಕ್ರಿಯೆ ಹಾಗೂ ವಿಧಾನಗಳನ್ನು ಷರತ್ತುಗಳಿಗೆ ಒಳಪಟ್ಟು ಜಾರಿಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ನಬಾರ್ಡ್, ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರ ಬ್ಯಾಂಕ್ ಈ ಮೂರು ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಕೈಗಾರಿಕ ಸಹಕಾರ ಸಂಘಗಳ ಮೂಲಕ ರೀಲರುಗಳಿಗೆ ನೀಡುವ ಸಾಲಗಳ ಮೇಲಿನ ಬಡ್ಡಿ ಶೇ.12.00% ರಂತೆ ವಾರ್ಷಿಕ ಅಂದಾಜು ಮೊತ್ತ ರೂ.1609.00 ಲಕ್ಷಗಳನ್ನು ಪಾವತಿಸಲು ಲೆಕ್ಕ ಶೀರ್ಷಿಕೆ: 2851-00-107-1-48(106) ರಡಿ ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ದುಡಿಮೆ ಬಂಡವಾಳದ ಯೋಜನೆಗೆ ಮಾಂಬಳ್ಳಿ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಕೊಳ್ಳೇಗಾಲ ಜಿಲ್ಲೆಗಳಿಂದ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಕೈಗಾರಿಕಾ ಸಹಕಾರ ಸಂಘಗಳಿಂದ ಆಯಾ ಜಿಲ್ಲಾ ವ್ಯಾಪ್ತಿಯ ಡಿ.ಸಿ.ಸಿ ಬ್ಯಾಂಕುಗಳಿಗೆ ಒಟ್ಟು 619 ಸಾಲದ ಅರ್ಜಿಗಳನ್ನು ಸಲ್ಲಿಸಿದ್ದು, ಜಿಲ್ಲಾ

		ಕೇಂದ್ರ ಸಹಕಾರ ಬ್ಯಾಂಕುಗಳ ಸಾಲ ನಿಯಮಾವಳಿಗಳ ಷರತ್ತುಗಳನ್ವಯ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಕೈಗಾರಿಕ ಸಹಕಾರ ಸಂಘಗಳು ಬ್ಯಾಂಕ್‌ಗಳಿಗೆ ಕೊಲ್ಯಾಟರಲ್ ಸೆಕ್ಯುರಿಟಿ ನೀಡಿದಲ್ಲಿ ಸಾಲ ಸೌಲಭ್ಯ ಪಡೆಯಬಹುದಾಗಿದೆ.
ಈ	ರಾಜ್ಯ ರೇಷ್ಮೆ ಇಲಾಖೆಯಲ್ಲಿ ಒಟ್ಟು ಎಷ್ಟು ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ; ರೇಷ್ಮೆ ಇಲಾಖೆಯು ಪೂರ್ಣ ಪ್ರಮಾಣದಲ್ಲಿ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ;	ರೇಷ್ಮೆ ಇಲಾಖೆಯಲ್ಲಿ ಒಟ್ಟು 4299 ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ ಒಟ್ಟು 1598 ಹುದ್ದೆಗಳು ಭರ್ತಿಯಾಗಿದ್ದು, 2701 ಹುದ್ದೆಗಳು ಖಾಲಿ ಇರುತ್ತವೆ. ರೇಷ್ಮೆ ಇಲಾಖೆಯಲ್ಲಿ ಪ್ರಸ್ತುತ ಲಭ್ಯವಿರುವ ಅಧಿಕಾರಿ/ಸಿಬ್ಬಂದಿಗಳಿಂದ ರೇಷ್ಮೆ ಬೆಳೆಗಾರರಿಗೆ ಸೂಕ್ತ ತಾಂತ್ರಿಕ ಮಾರ್ಗದರ್ಶನ ಹಾಗೂ ವ್ಯವಸ್ಥಿತವಾಗಿ ಇಲಾಖೆಯ ಕಾರ್ಯಕ್ರಮಗಳನ್ನು/ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
ಉ	ರಾಜ್ಯ ಸರ್ಕಾರದಲ್ಲಿ ರೇಷ್ಮೆ ಇಲಾಖೆಯನ್ನು ಬೇರೆ ಇಲಾಖೆಯಲ್ಲಿ ವಿಲೀನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಇಂತಹ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು?	ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ರೇಷ್ಮೆ 164 ರೇಕೃವಿ 2021

(ನಾರಾಯಣ ಗೌಡ)
ರೇಷ್ಮೆ ಹಾಗೂ ಯುವಸಬಲೀಕರಣ
ಮತ್ತು ಕ್ರೀಡಾ ಸಚಿವರು